





ಪಾತ್ರವಾಗಿರುವ ನಿಶಾತ್ ಬಾಗ್ ದಲ್ ಕೆರೆಯ ಪೂರ್ವಭಾಗದಲ್ಲಿದೆ. ಮೊಘಲ್ ರಾಣಿ ನೂರ್ ಜಹಾನ್‌ಳ ಅಣ್ಣ, ಅಬ್ದುಲ್ ಹಸನ್ ಆಸಫ್ ಖಾನ್ ಈ ಉದ್ಯಾನವನವನ್ನು 1633 ರಲ್ಲಿ ರೂಪಿಸಿದ. ಮೂಲ ನಕ್ಷೆ ಪರ್ಷಿಯಾದ ಉದ್ಯಾನವನಗಳನ್ನು ಹೋಲುತ್ತದಾದರೂ ಕಾಶ್ಮೀರದ ನೆಲ, ಎತ್ತರ, ನೀರಿನ ಅನುಕೂಲಕ್ಕೆ ತಕ್ಕಂತೆ ಮಾರ್ಪಾಟು ಮಾಡಲಾಗಿದೆ. ನಲವತ್ತಾರು ಎಕರೆ ಪ್ರದೇಶದಲ್ಲಿ ಹರಡಿ ನಿಂತಿರುವ ಈ ಉದ್ಯಾನವನಕ್ಕೆ ನಿಶಾತ್ ಬಾಗ್‌ಎಂಬುದು ಅನ್ವರ್ಥಕ ನಾಮ! ಏಕೆಂದರೆ ಉರ್ದುವಿನಲ್ಲಿ 'ನಿಶಾತ್' ಎಂದರೆ ಆನಂದ, ಸಂತೋಷ, ಖುಷಿ ಎಂದರ್ಥವಂತೆ.

ಉದ್ಯಾನವನ, ರಾಶಿ ಚಿಹ್ನೆಗೆ ಅನುಗುಣವಾಗಿ ಹನ್ನೆರಡು ತಾರಸಿ ನೆಲ ವಿಭಾಗಗಳನ್ನು ಹೊಂದಿದೆ. ಕೆಳಗಿನದ್ದು ದಲ್ ಸರೋವರದ ಹತ್ತಿರದಿಂದ ಆರಂಭವಾಗುತ್ತದೆ. ಕಡೆಯದು ಜನಾನಾ ಭಾಗ. ಈಗ ಉಳಿದಿರುವುದು ಒಂಬತ್ತು ಮಾತ್ರ. ಉದ್ಯಾನದುದ್ದಕ್ಕೂ ಬೃಹತ್ ಚಿನಾರ್ ಮತ್ತು ಸಿಪ್ರಸ್ ಮರಗಳನ್ನು ಕಾಣಬಹುದು. ಚಿನಾರ್ ಮರಗಳನ್ನು ಮೊಘಲರು ಪರ್ಷಿಯಾದಿಂದ ಕಾಶ್ಮೀರಕ್ಕೆ ತಂದಿದ್ದರು ಎನ್ನಲಾಗುತ್ತದೆ. ಅಪರೂಪದ ಹೂವಿನ ತಳಿಗಳು, ಕಾರಂಜಿಗಳು, ವಿಸ್ತಾರವಾಗಿ ಹರಡಿರುವ ಹಸಿರು ಹುಲ್ಲಿನ ಹಾಸು, ಅಲ್ಲಲ್ಲಿ ನೀರಿನ ಕಾಲುವೆ, ಇಕ್ಕೆಲಗಳಲ್ಲಿ ವೃಕ್ಷಗಳು... ಇವೆಲ್ಲದರಿಂದ ನಿಶಾತ್ ಬಾಗ್ ನಿಜಕ್ಕೂ ಕಣ್ಣಿಗೆ ಹಬ್ಬ!

ಚೆಂದದ ನಿಶಾತ್ ಬಾಗ್ ಬಗ್ಗೆಯೂ ಕುತೂಹಲಕಾರಿ ಕತೆಯಿದೆ. ಮಾವ ಆಸಫ್ ಖಾನ್‌ಗೆ ತಾನು ರೂಪಿಸಿದ ಈ ಉದ್ಯಾನವನದ ಬಗ್ಗೆ ಎಲ್ಲಿಲ್ಲದ ಹೆಮ್ಮೆ. ಹಾಗೆಯೇ ಕಾಶ್ಮೀರಕ್ಕೆ ಬಂದ ಅಳಿಯ, ಮೊಘಲ್ ಸುಲ್ತಾನ ಷಹಜಹಾನ್‌ಗೆ ಈ ಉದ್ಯಾನವನವನ್ನು ತೋರಿಸಿದ್ದ. ನೋಡಿ ಬಹಳ ಆಕರ್ಷಿತನಾದ ಷಹಜಹಾನ್ ಮನಸ್ಸಿನಲ್ಲಿಯೇ ಇದನ್ನು ತನ್ನ ಮಾವ ತನಗೆ ಉಡುಗೊರೆಯಾಗಿ ನೀಡಲಿ ಅಂದುಕೊಂಡು ಮೂರು ಬಾರಿ ಬಹಳ ಸುಂದರವಾಗಿದೆ ಎಂದು ತನ್ನ ಆಸೆ ವ್ಯಕ್ತಪಡಿಸಿದನಂತೆ. ಅಳಿಯನ ಇಂಗಿತ ಗೊತ್ತಾಯಿತೋ ಇಲ್ಲವೋ; ಆದರೆ ಮಾವ, ತನಗೆ ಪ್ರಾಣ ಪ್ರಿಯವಾದ ನಿಶಾತ್ ಬಾಗ್ ಕೊಡುವ ಪ್ರಸ್ತಾಪ ಮಾಡಲೇ ಇಲ್ಲ. ಎಷ್ಟಾದರೂ ಸುಲ್ತಾನ, ಅಪಮಾನ ಸಹಿಸುವುದು ಸಾಧ್ಯವೇ? ತನಗೆ ಸಿಗದೇ ಹೋದರೆ ಬೇರೆಯವರಿಗೇಕೆ ಎಂದು ಯೋಚಿಸಿದ. ನಿಶಾತ್ ಬಾಗ್‌ಗೆ ನೀರು ಪೂರೈಕೆಯಾಗುತ್ತಿದ್ದದ್ದು ಸುಲ್ತಾನನ ಶಾಲಿಮಾರ್ ಬಾಗ್‌ನಿಂದ. ಕೋಪದಿಂದ ಆ ಸಂದರ್ಭದಲ್ಲಿ ನೀರಿನ ಸರಬರಾಜನ್ನು ನಿಲ್ಲಿಸಿ ಬಿಟ್ಟ. ನೀರಿಲ್ಲದೇ ನಿಶಾತ್ ಬಾಗ್ ಒಣಗುತ್ತಾ ಬಂತು. ನಳನಳಿಸುತ್ತಿದ್ದ ಉದ್ಯಾನವನದ ಈ ದುಸ್ಥಿತಿ ಕಂಡು ಸಹಜವಾಗಿಯೇ ಆಸಫ್ ಖಾನ್‌ಗೆ ದುಃಖವಾಯಿತು. ಇದೇ ಕೊರಗಿನಲ್ಲಿ ಆತ ಅಸ್ವಸ್ಥನಾದ.

ಹಾಗೇ ಒಂದು ದಿನ ಉದ್ಯಾನವನದ ಮರದ ನೆರಳಿನಲ್ಲಿ ಕುಳಿತು ಬೇಸರಿಸುತ್ತಿದ್ದಾಗ ಇದನ್ನು ನೋಡಲಾರದೇ ಆತನ ನಿಷ್ಠಾವಂತ ಸೇವಕನೊಬ್ಬ ಸಮಯ ಸಾಧಿಸಿ ಶಾಲಿಮಾರ್ ಬಾಗ್‌ನಿಂದ ನೀರು ಹರಿಸಿಬಿಟ್ಟ.ಆಸಫ್ ಖಾನ್‌ಗೆ ನೀರು ಕಂಡು ಖುಷಿಯಾದರೂ ಒಳಗೊಳಗೇ ಹೆದರಿಕೆ. ವಿಷಯ ಸುಲ್ತಾನನಿಗೂ ತಿಳಿಯಿತು. ಯಾರಿಗೆ ಏನು ಮಾಡುವನೋ ಎಂಬ ಗಾಬರಿ ಎಲ್ಲರಿಗೂ! ಅದೃಷ್ಟ ಚೆನ್ನಾಗಿತ್ತಾದ್ದರಿಂದ ಸುಲ್ತಾನ ಯಾರನ್ನೂ ಶಿಕ್ಷಿಸಲಿಲ್ಲ, ಬದಲಿಗೆ ಈ ಕೆಲಸ ಮಾಡಿದ ಸೇವಕನ ಧೈರ್ಯ ಮೆಚ್ಚಿಕೊಂಡ. ಆತನಿಗೆ ಬಹುಮಾನ ನೀಡಿದ. ಅಂದಿನಿಂದ ನಿಶಾತ್ ಭಾಗ್‌ಗೆ ನೀರಿನ ಸರಬರಾಜು ಯಾವುದೇ ತೊಂದರೆಯಿಲ್ಲದೇ ಮುಂದುವರಿಯಿತು. ನಿಶಾತ್ ಬಾಗ್‌ನ ಸಂಪೂರ್ಣ ಹಕ್ಕು ಆಸಫ್ ಖಾನ್‌ಗೆ ನೀಡಲಾಯಿತು.

ಮೊಘಲ್ ದೊರೆಗಳ ಸೌಂದರ್ಯಪ್ರಜ್ಞೆ ಮತ್ತು ಗತವೈಭವ ಸಾರುವ ನಿಶಾತ್ ಬಾಗ್ ಈಗಲೂ ಸುಸ್ಥಿತಿಯಲ್ಲಿದ್ದು ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದೆ. ಶ್ರೀನಗರದ ಹೃದಯಭಾಗದಿಂದ ಸುಮಾರು 11 ಕಿ.ಮೀ ದೂರದಲ್ಲಿರುವ ಇಲ್ಲಿಗೆ ಬಸ್, ಆಟೋ, ಖಾಸಗಿ ವಾಹನಗಳ ಮೂಲಕ ಸುಲಭವಾಗಿ ತಲುಪಬಹುದು. ಹಾಗೆಯೇ ದಲ್ ಸರೋವರದ ಮೂಲಕ ಶಿಕಾರಾ (ದೋಣಿ) ದಲ್ಲಿ ಬರುವುದು ವಿಶೇಷ ಅನುಭವ. ಏಪ್ರಿಲ್‌ನಿಂದ ಅಕ್ಟೋಬರ್ ತಿಂಗಳು ಬೇಸಿಗೆ ಇದ್ದಾಗ ಸಂದರ್ಶಿಸಲು ಅತ್ಯುತ್ತಮ ಕಾಲ. ಶುಕ್ರವಾರದ ಹೊರತು ಎಲ್ಲಾ ದಿನಗಳೂ ಉದ್ಯಾನವನ ಬೆಳಿಗ್ಗೆ ಒಂಬತ್ತರಿಂದ ಸಂಜೆ ಐದರವರೆಗೆ ತೆರೆದಿದ್ದು ಪ್ರವೇಶ ಧನ ಹತ್ತು ರೂಪಾಯಿ.

ನಿಶಾತ್ ಬಾಗ್‌ನಲ್ಲಿ ಬಣ್ಣ ಬಣ್ಣದ ಹೂವುಗಳನ್ನು ನೋಡುತ್ತಾ, ಹಸಿರು ಹುಲ್ಲು ಹಾಸಿನಲ್ಲಿ ನಡೆಯುತ್ತಾ , ಕೈಯಲ್ಲಿ ಬಿಸಿ ಕಾಶ್ಮೀರಿ ಚಹಾ ಕಹ್ವಾ ಹೀರುತ್ತಿದ್ದರೆ ಸ್ವರ್ಗ ಸುಖ!